# ಯಾರು ಬಾಪ್ತಿಸ್ಮ ಹೊಂದಿಕೊಳ್ಳಬೇಕು?

ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಕೇಳುವ ಕೆಲವರು ಬಾಪ್ತಿಸ್ಮ ಹೊಂದಲು ಸಿದ್ಧರಾಗಿರುವದಿಲ್ಲ, ಮತ್ತು ಕೆಲವರು ಬಾಪ್ತಿಸ್ಮ ಮಾಡಿಸಿಕೊಳ್ಳುವದನ್ನು ತಿರಸ್ಕರಿಸುವರು ಯಾಕಂದರೆ ಅವರು ತಾವು ಬಾಪ್ತಿಸ್ಮದಲ್ಲಿ ಆಗಬಹುದಾದ ಬದಲಾವಣೆಗಳನ್ನು ಆಗಲೇ ಹೊಂದಿಕೊಂಡಿದ್ದೇವೆ ಎಂದು ಯೋಚಿಸುವರು.

### ಬಾಪ್ತಿಸ್ಮ ಮಾಡಿಸಿಕೊಳ್ಳಲು ಒಬ್ಬನು ಯಾವಾಗ ಸಿದ್ಧನಾಗಿರುವನು?

ಬಾಪ್ತಿಸ್ಮ ಮಾಡಿಸುವವರು ತಮ್ಮ ದಶಕದ ವಯಸ್ಸನ್ನು ತಲುಪುವ ಮೊದಲು ಬಾಪ್ತಿಸ್ಮ ಹೊಂದಲು ಬಯಸುವಾಗ ಯಾವಾಗಲೂ ಚಿಂತಿತರಾಗುವರು. ಬಾಪ್ತಿಸ್ಮಕ್ಕಾಗಿ ಬಯಸುವವನ ವಯಸ್ಸನ್ನು ಕುರಿತು ಬೈಬಲು ನಿಯಮಗಳನ್ನು ಮಾಡಿರುವದಿಲ್ಲ. ಮಕ್ಕಳು ಹನ್ನೆರಡು ವರ್ಷದ ಪ್ರಾಯದವರಾದಾಗ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಕೆಲವರು ಹೇಳಿದ್ದಾರೆ ಯಾಕಂದರೆ ಯೇಸುವು ದೇವಾಲಯಕ್ಕೆ ಹೋದಾಗ, ಹನ್ನೆರಡು ವರ್ಷದವನಾಗಿದ್ದನು (ಲೂಕ 2:42). ಆ ಸಮಯದಲ್ಲಿ ಆತನು ತನ್ನ ತಾಯಿಗೆ, “ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?” (ಲೂಕ 2:49) ಎಂದು ಪ್ರಶ್ನಿಸಿದನು.

ಹೀಗಿದ್ದರೂ, ಯೇಸುವು ಹನ್ನೆರಡು ವರ್ಷ ಪ್ರಾಯದವನಾಗಿದ್ದಾಗ ಬಾಪ್ತಿಸ್ಮ ಹೊಂದಲಿಲ್ಲ, ಆದರೆ ಆತನು ತನ್ನ ಸೇವೆಯನ್ನು ಪ್ರಾರಂಭಿಸುವದಕ್ಕಿಂತ ಮೊದಲು, ಮೂವತ್ತು ವರ್ಷದವನಾಗಿದ್ದಾಗ ಬಾಪ್ತಿಸ್ಮ ಮಾಡಿಸಿಕೊಂಡನು (ಲೂಕ 3:23). ಈ ವಿಷಯದಲ್ಲಿ ಯೇಸುವು ನಮ್ಮ ಉದಾಹರಣೆಯಾಗಿರುವದಿಲ್ಲ, ಯಾಕಂದರೆ ಆತನು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮದ ಅವಶ್ಯಕತೆಯುಳ್ಳವನಾಗಿರಲಿಲ್ಲ. ಬಾಪ್ತಿಸ್ಮವನ್ನು ಹೊಂದಿಕೊಳ್ಳಲಿಕ್ಕೆ ಅಗತ್ಯವಾದ ಸಂಗತಿಗಳನ್ನು ಆತನು ಮಾಡಬೇಕಾಗಿರಲಿಲ್ಲ; ದೇವರ ವಾಕ್ಯವು ಬೋಧಿಸಲ್ಪಡಬೇಕಾಗಿರಲಿಲ್ಲ (ಯೋಹಾನ 6:45), ಯೇಸುವಿನಲ್ಲಿ ನಂಬಿಕೆ ಇಡಬೇಕಾಗಿರಲಿಲ್ಲ (ಯೋಹಾನ 8:24), ಪಾಪಗಳಿಗಾಗಿ ಮಾನಸಾಂತರ ಪಡಬೇಕಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 17:30), ಮತ್ತು ಯೇಸುವನ್ನು ಅರಿಕೆ ಮಾಡಬೇಕಾಗಿರಲಿಲ್ಲ (ರೋಮಾಪುರ 10:9, 10). ಪ್ರಶ್ನೆಯು ವಯಸ್ಸಿನದಾಗಿರಲಿಲ್ಲ, ಆದರೆ ಗ್ರಹಿಕೆ, ಹೂಣಿಡುವಿಕೆ ಮತ್ತು ಅಪೇಕ್ಷೆಯಾಗಿತ್ತು. ಯುವ ಜನರು ಭಿನ್ನವಾದ ವಯಸ್ಸಿನಲ್ಲಿ ಪ್ರೌಢರಾಗುತ್ತಾರೆ.

ಬಾಪ್ತಿಸ್ಮ ಹೊಂದಬೇಕೆಂದು ಕೇಳುವವರ ಸಿದ್ಧತೆಯನ್ನು ನಿರ್ಧರಿಸುವದಕ್ಕೆ ಈ ಕೆಳಗಿನ ಪ್ರಶ್ನೆಗಳಲ್ಲಿ ಕೆಲವನ್ನು ಯೋಚಿಸಬೇಕು:

1. ನೀನು ಬಾಪ್ತಿಸ್ಮ ಹೊಂದಲು ಯಾಕೆ ಬಯಸುತ್ತೀ?
2. ನೀನು ಪಾಪಿಯಾಗಿದ್ದೀಯೋ? ನಿನ್ನ ಪಾಪಗಳ ನಿಮಿತ್ತವಾಗಿ ದೇವರು ನಿನ್ನನ್ನು ಶಿಕ್ಷಿಸುವನೆಂದು ಭಯಪಡುತ್ತೀಯೋ?
3. ನಿನ್ನ ಪಾಪಗಳ ನಿಮಿತ್ತ ನೀನು ದೇವರಿಂದ ಬೇರ್ಪಡಿಸಲ್ಪಟ್ಟಿರುವಿಯೆಂದು ನಂಬುತ್ತೀಯೋ?

4. ಈಗಲೇ ದೇವರು ನಿನಗೆ ನ್ಯಾಯತೀರಿಸುವುದಾದರೆ, ಆತನು ನಿನ್ನನ್ನು ಪರಲೋಕಕ್ಕೆ ತೆಗೆದುಕೊಂಡು ಹೋಗುವನೋ ಇಲ್ಲವೇ ನರಕಕ್ಕೆ ಕಳುಹಿಸುವನೋ?
5. ನಿನ್ನ ಕಡೆಗೆ ದೇವರ ಮನೋಭಾವನೆಯು ಏನಾಗಿರುವದೆಂದು ನೀನು ತಿಳಿಯುತ್ತೀ? ನಿನ್ನ ಪಾಪಗಳ ನಿಮಿತ್ತವಾಗಿ ಆತನು ತನ್ನ ಮುಖವನ್ನು ನಿನ್ನಿಂದ ಮರೆಮಾಡಿಕೊಳ್ಳುವನೆಂದು ಯೋಚಿಸುತ್ತೀಯೋ?
6. ಯೇಸುವು ಯಾರಾಗಿದ್ದಾನೆಂದು ನೀನು ನಂಬುತ್ತೀ (ಯೋಹಾನ 8:24; ರೋಮಾಪುರ 10:9)?
7. ಇಂದು ನೀನು ಸಾಯುವದಾದರೆ, ನೀನು ಒಬ್ಬ ಪಾಪಿಯಾಗಿ ಸಾಯುವಿಯೋ?
8. ಮಾನಸಾಂತರವು ಏನಾಗಿದೆ?
9. ನಿನ್ನ ಪಾಪಗಳನ್ನು ಕ್ಷಮಿಸಲು ಯೇಸುವು ಏನು ಮಾಡಿದ್ದಾನೆ (ಮತ್ತಾಯ 26:28)? ನಿನ್ನ ಪಾಪಗಳನ್ನು ಯಾವುದು ಕ್ಷಮಿಸುವುದು ಮತ್ತು ತೊಳೆಯುವುದು? (ಇಬ್ರಿಯ 9:22; ಪ್ರಕಟನೆ 1:5)? ಇದು ಯಾವಾಗ ಸಂಭವಿಸುವುದು?
10. ನೀನು ಬಾಪ್ತಿಸ್ಮ ಹೊಂದಿದಾಗ, ನೀನು ಈಗ ಜೀವಿಸುತ್ತಿರುವದಕ್ಕಿಂತ ಭಿನ್ನವಾಗಿ ಹೇಗೆ ಜೀವಿಸುವಿ?
11. ನಿನ್ನ ಪಾಪಗಳು ಕ್ಷಮಿಸಲ್ಪಡಬೇಕಾದರೆ ನೀನು ಏನು ಮಾಡತಕ್ಕದ್ದು?
12. ನೀನು ಬಾಪ್ತಿಸ್ಮ ಹೊಂದುವಾಗ, ಯೇಸುವು ನಿನ್ನ ಜೀವನದ ಕರ್ತನಾಗುವನೋ?
13. ನೀನು ಬಾಪ್ತಿಸ್ಮ ಹೊಂದಿದಾಗ ನೀನು ಯಾರ ಸಭೆಯನ್ನು ಪ್ರವೇಶಿಸುವಿ?
14. ಒಂದು ನೂತನ ಜೀವನ ಪ್ರಾರಂಭಿಸಲು ನೀನು ಸಿದ್ಧನಾಗಿರುವಿಯೋ?

ತಾನು ಒಬ್ಬ ಪಾಪಿಯಾಗಿದ್ದಾನೆಂದು ಅರ್ಥಮಾಡಿಕೊಳ್ಳುವ ವ್ಯಕ್ತಿಯು ತನ್ನ ಪಾಪಗಳ ನಿಮಿತ್ತವಾಗಿ ದೇವರಿಂದ ಬೇರ್ಪಡಿಸಲ್ಪಟ್ಟಿದ್ದಾನೆಂದು ನಂಬುತ್ತಾನೆ. ಯೇಸುವಿನ ರಕ್ತವು ತನ್ನ ಪಾಪಗಳನ್ನು ತೊಳೆಯುವುದೆಂದು ಯೇಸುವಿನಲ್ಲಿ ಆತನನ್ನು ಕರ್ತನಂತೆ ಮತ್ತು ರಕ್ಷಕನಂತೆ ನಂಬಿದರೆ, ಯೇಸುವನ್ನು ಹಿಂಬಾಲಿಸಲು ತನ್ನ ಜೀವಿತವನ್ನು ಬದಲಾಯಿಸಲು ಸಿದ್ಧನಿದ್ದರೆ, ಮತ್ತು ದೇವರೊಂದಿಗೆ ತಪ್ಪಾದ ಸಂಬಂಧವನ್ನು ಸರಿಪಡಿಸಿಕೊಳ್ಳುವ ಅಗತ್ಯತೆಯಿದೆಯೆಂದು ಅರ್ಥಮಾಡಿಕೊಂಡರೆ, ಆಗ ಅವನು ಬಾಪ್ತಿಸ್ಮ ಹೊಂದಲು ಸಿದ್ಧನಾಗಿರುವನು. ತನ್ನ ಪಾಪಗಳು ಕ್ಷಮಿಸಲ್ಪಡುವದು ಮತ್ತು ತಾನು ದೇವರೊಂದಿಗೂ ಹಾಗೂ ಜೊತೆ ಕ್ರೈಸ್ತರೊಂದಿಗೂ ಅನ್ಯೋನ್ಯತೆಯಲ್ಲಿ ಪ್ರವೇಶಿಸುವನು ಎಂದೂ ಅವನು ಅರ್ಥಮಾಡಿಕೊಳ್ಳತಕ್ಕದ್ದು.

## ಈಗಾಗಲೇ ಬಾಪ್ತಿಸ್ಮ ಹೊಂದಿದವನ ಬಗ್ಗೆ ಏನು?

ಈಗಾಗಲೇ ಬಾಪ್ತಿಸ್ಮ ಹೊಂದಿದ ಕೆಲವರು, ತಾವು ಬಾಪ್ತಿಸ್ಮ ಹೊಂದಿದಾಗ ಅವರು ಏನು ಮಾಡುತ್ತಿದ್ದರು ಎಂಬುದರ ಅರ್ಥವನ್ನು ಗ್ರಹಿಸಿಕೊಳ್ಳದಿದ್ದರೂ ತಾವು ರಕ್ಷಿಸಲ್ಪಟ್ಟಿದ್ದೇವೆಂದು ನಂಬುತ್ತಾರೆ. ಅವರು ಬಾಪ್ತಿಸ್ಮ ಹೊಂದಿದಾಗ ದೇವರ ಚಿತ್ತವನ್ನು ಅವರು ಅರ್ಥ ಮಾಡಿಕೊಂಡಿರದಿದ್ದರೆ ಪರಿಶುದ್ಧ ಬರಹಕ್ಕನುಗುಣವಾದ ಬಾಪ್ತಿಸ್ಮದ ಅವಶ್ಯಕತೆ ತಮಗಿರುವದನ್ನು ತಿಳಿಯಲು ಈ ಮುಂದಿನ ಪ್ರಶ್ನೆಗಳು ಸಹಾಯ ಮಾಡಬಹುದು.

1. ನೀವು ಬಾಪ್ತಿಸ್ಮ ಹೊಂದಿದಿರೋ?
2. ಬಾಪ್ತಿಸ್ಮ ಹೊಂದಿದಾಗ ನೀವು ಎಷ್ಟು ವಯಸ್ಸಿನವರಾಗಿದ್ದಿರಿ?
3. ನಿಮ್ಮಷ್ಟಕ್ಕೆ ನಿಮ್ಮ ಬೈಬಲಿನ ಅಧ್ಯಯನ ಮಾಡುತ್ತಿರುವಿರೋ?
4. ಬಾಪ್ತಿಸ್ಮದ ಬಗ್ಗೆ ನೀವು ತಿಳಿದದ್ದನ್ನು ನಿಮ್ಮ ಸಭೆಯ ಪ್ರಸಂಗಿಸುವಿಕೆ ಮತ್ತು ಬೋಧನೆಯಿಂದ ಕಲಿತುಕೊಂಡಿರೋ?
5. ಯಾವ ಸಭಾಪಂಗಡದ ಪ್ರಸಂಗಿಯು ನಿನಗೆ ಬಾಪ್ತಿಸ್ಮ ಮಾಡಿಸಿದನು?
6. ಸುವಾರ್ತಿಕ ಕೂಟದ ಸಮಯದಲ್ಲಿ ನೀವು ಮುಂದೆ ಹೋದಿರೋ?
7. ನೀವು ಮುಂದೆ ಹೋದಾಗ ಏನಾಯಿತೆಂಬುದನ್ನು ವಿವರಿಸಿರಿ. ಇತರರು ನಿಮ್ಮೊಂದಿಗೆ ಪ್ರಾರ್ಥಿಸಿದರೋ? "ಪಾಪಿಯ ಪ್ರಾರ್ಥನೆ" ಎಂದು ಕರೆಯುವಂಥದ್ದನ್ನು ಯಾರಾದರೂ ನೀನು ಹೇಳುವಂತೆ ಮಾಡಿದರೋ?
8. "ಕ್ರಿಸ್ತನ ನಿಮಿತ್ತವಾಗಿ ದೇವರು ನನ್ನ ಪಾಪಗಳನ್ನು ಮನ್ನಿಸಿದನು" ಎಂಬಂಥ ಅರಿಕೆಯನ್ನು ಸಭೆಯ ಮುಂದೆ ಮಾಡಿರುವಿಯೋ? ಹಾಗಿದ್ದರೆ, ಇದನ್ನು ಮಾಡಿದ ನಂತರ ನೀನು ರಕ್ಷಿಸಲ್ಪಟ್ಟಿರುವಿಯೆಂದು ತಿಳಿದುಕೊಂಡಿಯೋ?
9. ನೀನು ರಕ್ಷಿಸಲ್ಪಟ್ಟದ್ದಕ್ಕಾಗಿ ಜನರು ಆನಂದಿಸಿದರೋ ಮತ್ತು ಅಭಿನಂದಿಸಿದರೋ? ಯಾವ ಹಂತದಲ್ಲಿ ಅವರು ಇದನ್ನು ಮಾಡಿದರು?
10. ನೀನು ಸಭೆಯ ಮುಂದೆ ಹೋಗುವಾಗ ನಿನ್ನ ಆತ್ಮಿಕ ಪರಿಸ್ಥಿತಿಯನ್ನು ಕುರಿತು ಪ್ರಸಂಗಿಯು ಏನೆಂದು ಸಾರಿದನು?
11. ಇದರ ನಂತರ ಎಷ್ಟು ಸಮಯದ ಮೇಲೆ ನೀನು ಬಾಪ್ತಿಸ್ಮ ಹೊಂದಿದಿ?
12. ನೀನು ಯಾಕೆ ಬಾಪ್ತಿಸ್ಮ ಹೊಂದಿದಿ?
13. ಬೈಬಲಿನ ಒಂದು ಬಾಪ್ತಿಸ್ಮಕ್ಕೆ ಇದು ಹೇಗೆ ಹೋಲಿಕೆಯಾಗುತ್ತದೆ?

ನಮ್ಮ ಬಾಪ್ತಿಸ್ಮದ ಕ್ರಮಬದ್ಧತೆಯು ಯಾರು ಬಾಪ್ತಿಸ್ಮ ಮಾಡಿಸಿದರು ಎಂಬುದರ ಮೇಲೆ ಅವಲಂಭಿಸಿರುವದಿಲ್ಲ. ನಮ್ಮ ಸ್ವಂತ ತಿಳುವಳಿಕೆ ಮತ್ತು ಒಪ್ಪಿಸಿಕೊಡುವಿಕೆಯು ಭಿನ್ನತೆಯನ್ನು ಮಾಡುತ್ತದೆ. ನಾವು ಬೈಬಲಿನ ಒಂದೇ ಬಾಪ್ತಿಸ್ಮವನ್ನು ಹೊಂದಿಕೊಂಡಿದ್ದೇವೆಂಬ ನಿಶ್ಚಿತತೆ ಮಾಡಿಕೊಳ್ಳುವ ಅವಶ್ಯಕತೆಯಿದೆ (ಎಫೆಸ 4:5). ಬಾಪ್ತಿಸ್ಮ ಎಂದು ಕರೆಯಲ್ಪಡುವದನ್ನು ಅನೇಕ ಜನರು ಹೊಂದಿಕೊಂಡಿದ್ದಾರೆ. ಆದರೆ ಒಂದೇ ಬಾಪ್ತಿಸ್ಮವನ್ನು ಅವರು ಸ್ವೀಕರಿಸಿಕೊಂಡಿರುವದಿಲ್ಲ. ಜಿ. ಸಿ. ಬ್ರಿವರ ಸರಿಯಾಗಿ ಹೇಳಿದ್ದಾರೆ,

> ಆದುದರಿಂದ, ಪರಿಶುದ್ಧ ಬರಹಗಳು ಬೋಧಿಸುವಂತೆ *ಬಾಪ್ತಿಸ್ಮ ಹೊಂದಿದವನು ಬಾಪ್ತಿಸ್ಮವು ಪಾಪಗಳ ಪರಿಹಾರಕ್ಕಾಗಿರುವುದು ಇಲ್ಲವೇ ರಕ್ಷಣೆಗಾಗಿ ಒಂದು ಶರತ್ತು ಆಗಿರುವದು ಎಂಬುದನ್ನು ತಿಳಿದಿರಬೇಕೆಂಬುದು ನಮ್ಮ ನಿರ್ಣಯವಾಗಿದೆ. ಅವನು ಇದನ್ನು ತಿಳಿದಿರದಿದ್ದರೆ, ಎಲ್ಲಿಯೋ ಯಾವುದೋ ತಪ್ಪಾಗಿ ಓದಿದಂತಿದೆ ಇಲ್ಲವೇ ತಪ್ಪಾಗಿ ನಡಿಸಿದಂತಿದೆ.*[1]

**ಟಿಪ್ಪಣಿ**

[1]G. C. Brewer, *Contending for the Faith* (Nashville: Gospel Advocate Co., 1941), 175-76. (Emphasis his.)



© 2009 Truth for Today